ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

13

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: [illegible]   ದಿನಾಂಕ : DATE : 20/9/2

ಸಂಸತ್ ಅಧಿವೇಶನ ಮೊಟಕು

ವಿ.ವಾ. 20-9-202

ಸಂಸದರಲ್ಲಿ ಕರೊನಾ ಹೆಚ್ಚುತ್ತಿರುವ ಹಿನ್ನೆಲೆ | ಬುಧವಾರ ಅಂತ್ಯ ಸಾಧ್ಯ

ನವದೆಹಲಿ: ಕರೊನಾ ವೈರಸ್ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಂಸತ್ ಮುಂಗಾರು ಅಧಿವೇಶನವನ್ನು ಮೊಟಕುಗೊಳಿಸುವಂತೆ ಸಂಸದೀಯ ವ್ಯಹವಾರದ ಸಲಹಾ ಸಮಿತಿಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ಕುರಿತು ಪ್ರಸ್ತಾವನೆಯನ್ನು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾಗೆ ಕಳುಹಿಸಲಾಗಿದ್ದು, ಅಂತಿಮ ನಿರ್ಧಾರವನ್ನು ಅವರು ಪ್ರಕಟಿಸುವ ಸಾಧ್ಯತೆ ಇದೆ.

ಸೆ. 14ರಂದು ಆರಂಭವಾಗಿರುವ ಅಧಿವೇಶನ ಅ. 1ರವರೆಗೆ ನಿಗದಿಯಾಗಿದೆ. ಆದರೆ ಮುಂದಿನ ಬುಧವಾರವೇ ಕಲಾಪ ಅಂತ್ಯಗೊಳ್ಳುವ ಸಾಧ್ಯತೆ ಹೆಚ್ಚಿದೆ. ಈ ಕುರಿತು ಪ್ರತಿಪಕ್ಷಗಳ ಜತೆ ಮಾತುಕತೆ ನಡೆಸಲಾಗಿದೆ. ಶನಿವಾರ ಸಂಜೆ ಸಲಹಾ ಸಮಿತಿಯಲ್ಲೂ ಈ ಬಗ್ಗೆ ಚರ್ಚೆ ನಡೆದಿದೆ. ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿ ಕಲಾಪ ನಡೆಸಲಾಗುತ್ತಿದ್ದರೂ, ಸಂಸದರಿಗೆ ಕರೊನಾ ಸೋಂಕು ಕಂಡುಬರುತ್ತಿದೆ. ಅವರ ಆರೋಗ್ಯ ದೃಷ್ಟಿಯಿಂದ ಕಲಾಪವನ್ನು ಅವಧಿಗೂ ಮುನ್ನ ಮುಕ್ತಾಯಗೊಳಿಸುವುದು ಸೂಕ್ತ ಎಂದು ಸಮಿತಿಯ ಬಹುತೇಕ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ. ಈವರೆಗೆ ಲೋಕಸಭೆಯ 17 ಸದಸ್ಯರು, ರಾಜ್ಯಸಭೆಯ [illegible] ಸದಸ್ಯರಿಗೆ [illegible] ದೃಢಪಟ್ಟಿದೆ. ಬಿಜೆಪಿಯ 12 ಸಂಸದರಲ್ಲಿ ಸೋಂಕು ಕಂಡುಬಂದಿದೆ. [illegible] ಸಂಸದರಿಗೆ [illegible] ಹಿನ್ನೆಲೆಯಲ್ಲಿ ಕರೊನಾ ಪ್ರಕರಣ [illegible]

ಮಸೂದೆಗಳು

- **ಆರೋಗ್ಯ ಸಿಬ್ಬಂದಿಗೆ ರಕ್ಷಣೆ ನೀಡುವ ಸಾಂಕ್ರಾಮಿಕ ಕಾಯ್ದೆ ತಿದ್ದುಪಡಿ ಮಸೂದೆಗೆ ರಾಜ್ಯಸಭೆಯಲ್ಲಿ ಅಂಗೀಕಾರ**
- **ಕಾರ್ಮಿಕ ಕಾಯ್ದೆಗೆ ಸಂಬಂಧಿಸಿದಂತೆ ಮೂರು ತಿದ್ದುಪಡಿ ಮಸೂದೆ ಲೋಕಸಭೆಯಲ್ಲಿ ಮಂಡನೆ**



ಸಂಸತ್‌ನಲ್ಲಿ ಸರ್ಕಾರ ಹೇಳಿದ್ದು..

- **ಮಿಲಿಟರಿ ಕ್ಯಾಂಟೀನ್‌ಗಳಲ್ಲಿ ಕೇವಲ ಮೇಡ್ ಇನ್ ಇಂಡಿಯಾ ವಸ್ತುಗಳನ್ನು ಮಾರಾಟ ಮಾಡುವ ಬಗ್ಗೆ ನಿರ್ಧಾರ ಕೈಗೊಂಡಿಲ್ಲ.**
- **ಡಿಆರ್‌ಡಿಒ 8 ಅತ್ಯಾಧುನಿಕ ತಂತ್ರಜ್ಞಾನ ಕೇಂದ್ರಗಳನ್ನು ದೇಶಾದ್ಯಂತ ಸ್ಥಾಪಿಸಿದ್ದು, ರಕ್ಷಣೆಗೆ ಸಂಬಂಧಿಸಿದ ಸಂಶೋಧನೆ ನಡೆಯುತ್ತಿದೆ**
- **2ಸಾವಿರ ರೂ. ನೋಟುಗಳನ್ನು ಚಲಾವಣೆಯಿಂದ ಹಿಂದೆ ಪಡೆಯುವ ಯಾವುದೇ ಪ್ರಸ್ತಾವನೆ ಇಲ್ಲ.**
- **ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ನೇರ ತೆರಿಗೆ ಸಂಗ್ರಹದ ಶೇ. 31 ಕುಸಿತ ಮತ್ತು ಪರೋಕ್ಷ ತೆರಿಗೆ ಶೇ. 11 ಹಿನ್ನ**

ಹಿಂದಿ ಹೇರಿಕೆ ಸಲ್ಲದು

ನಾನು ಹಿಂದಿ ವಿರೋಧಿಯಲ್ಲ. ಆದರೆ, ಪ್ರಾದೇಶಿಕ ಭಾಷೆಗಳ ಮೇಲೆ ಹಿಂದಿ ಹೇರುವುದನ್ನು ಖಂಡಿತಾ ವಿರೋಧಿಸುತ್ತೇನೆ ಎಂದು ಮಂಡ್ಯ ಸಂಸದೆ ಸುಮಲತಾ ಹೇಳಿದರು. ಶೂನ್ಯವೇಳೆಯ ಕಲಾಪದಲ್ಲಿ ಮಾತನಾಡಿದ ಅವರು, ಭಾಷಾ ಹೇರಿಕೆಯಿಂದ ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದರು. ಹಿಂದಿ ಹೇರಿಕೆ ಮೂಲಕ ಕನ್ನಡವನ್ನು ಮೂಲೆಗುಂಪು ಮಾಡುವುದು ಭಾವನೆಗೆ ಘಾಸಿಯುಂಟುಮಾಡುತ್ತದೆ. ಕೇಂದ್ರ ಸರ್ಕಾರದ ತ್ರಿಭಾಷಾ ಸೂತ್ರ ಸ್ಥಳೀಯ ಭಾಷೆಯ ಮೇಲೆ ಹಿಂದಿ ಹೇರುವುದೇ ಆಗಿದೆ ಎಂಬ ಅಭಿಪ್ರಾಯ ಬಲಗೊಳ್ಳುತ್ತಿದೆ. ಕೇಂದ್ರವು ವಿವಿಧತೆಯಲ್ಲಿ ಏಕತೆಯ ತತ್ವವನ್ನು ಮರೆಯಬಾರದು ಎಂದರು.

ರಾಜ್ಯಗಳಿಗೆ ಜಿಎಸ್‌ಟಿ ಪಾವತಿ ವಿಚಾರದಲ್ಲಿ ಕೇಂದ್ರ ಹಿಂದೆ ಸರಿದಿಲ್ಲ. ಈ ಕುರಿತು ಜಿಎಸ್‌ ಸಭೆಯಲ್ಲಿ ಚರ್ಚಿಸಲಾಗಿದೆ. ದೊಡ್ಡ ಮೊತ್ತದ ಸಾಲ ಉಳಿಸಿಕೊಂಡವರು ಮತ್ತು ಅವರಿಗೆ ಗ್ಯಾರೆಂಟಿ ನೀಡಿದವರ ವಿರುದ್ಧ ಏಕಕಾಲದಲ್ಲಿ ಕೇಸ್ ನಡೆಯಲಿ

| ನಿರ್ಮಲಾ ಸೀತಾರಾಮ
ಕೇಂದ್ರ ವಿತ್ತ ಸ

ರಾಜ್ಯಸಭೆಯಲ್ಲಿ ಎನ್‌ಡಿಎಗೆ ಕೃಷಿಪರೀ

ನವದೆಹಲಿ: ಮಿತ್ರಪಕ್ಷದಿಂದಲೇ ವಿರೋಧಕ್ಕೆ ಗುರಿಯಾಗಿರುವ ಕೃಷಿ ಮಸೂದೆಗಳನ್ನು [illegible] ಭಾನುವಾರ ರಾಜ್ಯಸಭೆಯಲ್ಲಿ ಮಂಡಿಸಲಿದೆ. ರಾಜ್ಯಸಭೆಯಲ್ಲಿ ಸರ್ಕಾರಕ್ಕೆ ಸ್ಪಷ್ಟ ಬಹುಮತ ಇಲ್ಲದಿರುವುದು ಬಿಜೆಪಿಯನ್ನು [illegible] ಜತೆ ಸೇರಿ ಈ ಮಸೂದೆಯ [illegible] ವಿರೋಧಿಸುತ್ತಿವೆ. ಹೊಸ ಕಾಯ್ದೆ ಮೂಲಕ ಬೆಂಬಲ ಬೆಲೆಯನ್ನು ರದ್ದುಗೊಳಿಸಲಾಗುತ್ತದೆ. ಕಾರ್ಪೋರೇಟ್ ಕಂಪನಿಗಳಿಗೆ ಇದರಿಂದ ಲಾಭವಾಗಲಿದೆ. ರೈತರಿಗೆ ಅನ್ಯಾಯವಾಗಲಿದೆ ಎಂಬುದು ಅವರ ಆರೋಪವಾಗಿದೆ. ಈ ಮಸೂದೆಗೆ ವಿರೋಧ ವ್ಯಕ್ತಪಡಿಸಿ ಈಗಾಗಲೇ ಶಿರೋಮಣಿ ಅಕಾಲಿ ದಳ ಕೇಂದ್ರ ಸಂಪುಟದಿಂದ ಹೊರ ನಡೆದಿದೆ. ಮಿತ್ರಪಕ್ಷದಿಂದಲೇ ವಿರೋಧ ಎದುರಾಗಿರುವುದು ಸರ್ಕಾರಕ್ಕೆ ತುಸು ಹಿನ್ನಡೆ ಉಂಟಾಗಿ

ಕೇಂದ್ರದ ಯತ್ನ: ಮಸೂದೆಗೆ ಬೆಂಬಲ ನೀಡುವಂತೆ ಯುಪಿಎ ಹೊರತಾದ ಪ್ರತಿಪಕ್ಷಗಳಿಗೆ ಬಿಜೆಪಿ ಮನವಿ ಮಾಡಿದೆ. ಸಚಿವರಾದ ಪ್ರಹ್ಲಾದ್ ಜೋಶಿ, ರಾಜನಾಥ ಸಿಂಗ್, ಪಿಯೂಷ್ ಗೋಯೆಲ್ ವಿವಿಧ ಪಕ್ಷಗಳ ಮುಖಂಡರ ಜತೆ ಚರ್ಚೆ ನಡೆಸುತ್ತಿದ್ದಾರೆ. 130 ಸದಸ್ಯ ಬಲ ತಮಗಿದೆ ಎಂದು ಬಿಜೆಪಿಯ ಹಿರಿಯ ನಾಯಕರು ಹೇಳಿಕೊಂಡಿದ್ದಾರೆ. ಬಿಜೆಪಿ ತನ್ನ ಸಂಸದರಿಗೆ ವಿಪ್ ಜಾರಿ ಮಾಡಿದೆ.

ಕೃಷಿ [illegible] ಮಸೂದೆಗಳನ್ನು ವಿರೋಧಿಸಿ ಪಂಜಾಬ್‌ನ ಮುಕ್ತಸರ್‌ನಲ್ಲಿ ರೈತನೊಬ್ಬ ಆತ್ಮಹತ್ಯೆ

ಯಾರ ವಿರೋಧ?
ಕಾಂಗ್ರೆಸ್, ಟಿಎಂಸಿ, [illegible] ಎಸ್, ಡಿಎಂಕೆ, ಶಿವಸೇನೆ, ಆರ್ [illegible]

ಯಾರ ಬೆಂಬಲ?
ಬಿಜೆಪಿ, ಬಿಜೆಡಿ, ವೈಎಸ್‌ಆರ್‌ಪಿ, ಟಿಡಿಪಿ, ಎಐಎಡಿಎಂಕೆ.

ರಾಜ್ಯಸಭೆ ಬಲಾಬಲ
ಒಟ್ಟು ಸ್ಥಾನ: 245 ತೆರವಾದ ಸ್ಥಾನ: 2
ಬಹುಮತಕ್ಕೆ ಅಗತ್ಯ: 122
● ಬಿಜೆಪಿ - 86 ● ಕಾಂಗ್ರೆಸ್ - 40 ● ಟಿಎಂಸಿ - 13 ● ಬಿಜೆಡಿ - 9 ● ಸಮಾಜ ವಾದಿ ಪಕ್ಷ - 8 ● ವೈಎಸ್‌ಆರ್ ಕಾಂಗ್ರೆಸ್ - 6 ● ಟಿಆರ್‌ಎಸ್ - 7 ● ಆರ್‌ಜೆಡಿ - 5 ● ಜೆಡಿಯು - 5 ● ಡಿಎಂಕೆ - 7 ● ಎಐಎಡಿಎಂಕೆ - 9

ದೇವೇಗೌಡ ಇಂದು ಪ್ರಮಾಣವಚನ

ಬೆಂಗಳೂರು: ಮಾಜಿ ಪ್ರಧಾನಿ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ರಾಜ್ಯಸಭೆ ಸದಸ್ಯರಾಗಿ ಭಾನುವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಜೂನ್ 12 ರಂದು ನಡೆದ ದ್ವೈವಾರ್ಷಿಕ ಚುನಾವಣೆಯಲ್ಲಿ ಅವರು ಅವಿರೋಧ ಆಯ್ಕೆಯಾಗಿದ್ದರು. ಜು.22ರಂದು ರಾಜ್ಯಸಭೆ ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಲಾಗಿತ್ತು. ಆದರೆ, ಅನಾರೋಗ್ಯ ಮತ್ತು ಕರೊನಾ ಸಾಂಕ್ರಾಮಿಕದ ಕಾರಣ ದೇವೇಗೌಡರು ನವದೆಹಲಿಗೆ ಪ್ರಯಾಣಿಸಲು ಆಗಿರಲಿಲ್ಲ.